ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಕರ್ನಾಟಕ ವಿಧಾನ ಸಭೆ ಅಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ

ದಿನಾಂಕ : DATE : 01/08/2019

# ಪಕ್ಷದಲ್ಲಿ ಫೈವ್‌ಸ್ಟಾರ್ ಸಂಸ್ಕೃತಿ ಬೆಳೆಸಬೇಡಿ

ಬೆಂಗಳೂರು: ನಾವು ಫುಟ್‌ಪಾತ್‌ನಲ್ಲಿ ಚಿತ್ರಾನ್ನ ತಿಂದು ಬಂದವರು. ಆದರೆ ಪಕ್ಷಕ್ಕೆ ಇಂದು ಫೈವ್ ಸ್ಟಾರ್ ಕಲ್ಚರ್ ಬಂದಿದೆ. ಹೆಸರಿಗೆ ಫೈವ್ ಸ್ಟಾರ್ ಅಷ್ಟೇ, ಒಳಗೆ ಹಳಸಿದ್ದೇ ಸಿಗೋದು! ಇಂತಹ ಸ್ಟಾರ್ ಕಲ್ಚರ್ ನಮಗೆ ಬೇಡ. ಫ್ಲೆಕ್ಸ್ ಬೇಡ, ಜೂಯ್ ಜೂಯ್ ಕಾರ್‌ಗಳು ಬೇಡ. ಬೀದಿಯಲ್ಲಿ ನಿಂತು ಒಟ್ಟಾಗಿ ದುಡಿಯಬೇಕು...



» **ಕಾಂಗ್ರೆಸ್ ನಾಯಕರಿಗೆ ರಮೇಶ್ ಕುಮಾರ್ ಸಲಹೆ**

ಕಾಂಗ್ರೆಸ್ ಮುಖಂಡರಿಗೆ ನಿರ್ಗಮಿತ ಸ್ಪೀಕರ್ ರಮೇಶ್‌ಕುಮಾರ್ ಕರೆ ನೀಡಿದ ಬಗೆಯಿದು.

ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ಪಕ್ಷದ ಸದಸ್ಯತ್ವ ಸ್ವೀಕರಿಸಿ ಮಾತನಾಡಿ, ನಮ್ಮ ಕಾರ್ಯಕರ್ತರಲ್ಲಿ ನೈತಿಕತೆ ಕುಸಿದಿದೆ. ಪುನಃ ನಾವು ರಾಜ್ಯದಲ್ಲಿ ಪಕ್ಷವನ್ನು ಬಲಗೊಳಿಸಬೇಕು. ಆಗ ದೇಶದಲ್ಲಿ ಪಕ್ಷಕ್ಕೆ ಭದ್ರ ಬುನಾದಿ ಬರಲಿದೆ ಎಂದರು.

ಆರ್‌ಎಸ್‌ಎಸ್‌ನವರು ದೇಶ ವಿಭಜಿಸಿದರು. ಸ್ವಾತಂತ್ರ್ಯಕ್ಕೂ ಮುನ್ನವೇ ಈ ಕೆಲಸ ಮಾಡಿದ್ದರು. ಸಿಪಾಯಿ ದಂಗೆ ವೇಳೆ ಅವರು ಎಲ್ಲಿದ್ದರು? ಬಿಜೆಪಿ ತ್ಯಾಗ ಏನಿದೆ? ಅವರಷ್ಟೇ ದೇಶಪ್ರೇಮಿಗಳು, ನಾವು ಬೇಕೂಫ್‌ಗಳಾ ಎಂದು ಪ್ರಶ್ನಿಸಿದರು.

4